**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸಕೋಟೆ</u>**

**<u>ಸಿ. ಸಿ. ನಂ. 1772/2017</u>**

ಪಿರ್ಯಾದುದಾರರು:– ನಂದಗುಡಿ ಪೋಲೀಸ್ ಠಾಣೆ, ಹೊಸಕೋಟೆ

ವಿರುದ್ಧ

ಆರೋಪಿಗಳು:–
1. ಕೃಷ್ಣಪ್ಪ ಜಿ.ಎಂ. ಬಿನ್ ಮುನಿವೆಂಕಟಪ್ಪ, 55 ವರ್ಷ
2. ಮುನಿರಾಜು ಬಿನ್ ಮುನಿವೆಂಕಟಪ್ಪ, 39 ವರ್ಷ

ಇಬ್ಬರ ವಾಸ: ಮುಗಬಾಳ, ಜಡಿಗೇನಹಳ್ಳಿ ಹೋಬಳಿ, ಹೊಸಕೋಟೆ ತಾಲ್ಲೂಕು.

**<u>ದೋಷಾರೋಪಣೆ</u>**

ಶ್ರೀ ಗಿರೀಶ ಆರ್.ಬಿ., ಬಿ.ಎ.ಎಲ್., ಎಲ್.ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು, ಆರೋಪಿಗಳಾದ ನಿಮ್ಮ ಮೇಲೆ ಆಪಾದಿಸುವುದೇನೆಂದರೆ:

ದಿ:07.04.2017 ರಂದು ಮಧ್ಯಾಹ್ನ 1.30 ಗಂಟೆ ಸಮಯದಲ್ಲಿ ಹೊಸಕೋಟೆ ತಾಲ್ಲೂಕು, ನಂದಗುಡಿ ಪೊಲೀಸ್ ಠಾಣಾ ಸರಹದ್ದು, ಮುಗಬಾಳ ಗ್ರಾಮದ ವಾಸಿ 1ನೇ ಆರೋಪಿಯಾದ ನಿಮಗೆ ಸೇರಿದ ಬಿಲ್ಡಿಂಗ್ ಮುಂಭಾಗದ ಸಿಮೆಂಟ್ ರಸ್ತೆಯಲ್ಲಿ ಆರೋಪಿಗಳಾದ ನೀವುಗಳು ಚಾ.ಸಾ.1ರವರಿಗೆ ತೊಂದರೆ ಕೊಡುವ ಸಮಾನ ಉದ್ದೇಶದಿಂದ ಚಾ.ಸಾ.1ರವರಿಗೆ ಚಾ.ಸಾ.2ರವರು ಕಾವೇರಿ ಗ್ರಾಮೀಣ ಬ್ಯಾಂಕಿನಲ್ಲಿ ಖಾತೆದಾರರ ಜನಸಂದಣಿ ಜಾಸ್ತಿಯಾಗಿದ್ದರಿಂದ ಸದರಿ ಸಾಲಿನಲ್ಲಿ ಖಾತೆದಾರರನ್ನು ಬ್ಯಾಂಕಿನ ಒಳಗೆ ಬಿಡುವಂತೆ ತಿಳಿಸಿದ್ದರಿಂದ ಚಾ.ಸಾ.1ರವರು ಬ್ಯಾಂಕಿನ ಹೊರಭಾಗದ ರಸ್ತೆಯಲ್ಲಿ ನಿಂತುಕೊಂಡು ಒಬ್ಬೊಬ್ಬರಾಗಿ ಬ್ಯಾಂಕಿನ ಒಳಗೆ ಖಾತೆದಾರರನ್ನು ಕಳುಹಿಸುತ್ತಿದ್ದರು.

ಅದೇ ಸಮಯದಲ್ಲಿ ಆರೋಪಿಗಳಾದ ನೀವುಗಳು ಬ್ಯಾಂಕಿನ ಬಳಿಗೆ ಬಂದು ಚಾ.ಸಾ.1ರವರಿಗೆ 3–4 ಜನರನ್ನು ಒಟ್ಟಿಗೆ ಬ್ಯಾಂಕಿನ ಒಳಗೆ ಕಳುಹಿಸು ಎಂದು ಹೇಳಿದಾಗ ಅದಕ್ಕೆ ಚಾ.ಸಾ.1ರವರು 'ನಾನು ಚಾ.ಸಾ.2ರವರ ಆದೇಶದಂತೆ ಒಬ್ಬೊಬ್ಬರನ್ನು ಕಳುಹಿಸುತ್ತಿದ್ದೇನೆ' ಎಂದು ಹೇಳಿದಾಗ ನಮ್ಮ ವಿರುದ್ಧ ಮಾತನಾಡುತ್ತೀಯಾ ಎಂದು ಬಾಯಿಗೆ ಬಂದಂತೆ ಬೈದಿರುತ್ತೀರಿ. ನಿಮ್ಮ ಪೈಕಿ 1ನೇ ಆರೋಪಿಯಾದ ನೀವು ನಿಮ್ಮ ಕೈಯಲ್ಲಿ ಹಿಡಿದುಕೊಂಡಿದ್ದ ಸ್ಟೀಲಿನ ಬಳೆಯಿಂದ ಚಾ.ಸಾ.1ರವರ ಮೂಗಿನ ಮೇಲೆ ಹೊಡೆದು ರಕ್ತಗಾಯಪಡಿಸಿರುತ್ತೀರಿ ಎಂದು ಆರೋಪಿಸಲಾಗಿದೆ. ಆ ಮೂಲಕ ನೀವು ಭಾ.ದಂ.ಸಂ. ಕಲಂ.324ರ ಸಹವಾಚಕ ಕಲಂ.34ರೀತ್ಯ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರೆಂದು ಆರೋಪಿಸಲಾಗಿದೆ.

ಅದೇ ದಿನ, ಅದೇ ಸಮಯ ಮತ್ತು ಸ್ಥಳದಲ್ಲಿ, 2ನೇ ಆರೋಪಿಯಾದ ನೀವು ಚಾ.ಸಾ.1ರವರಿಗೆ ಕೈಗಳಿಂದ ಮುಖದ ಮೇಲೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ ಎಂದು ಆರೋಪಿಸಲಾಗಿದೆ. ಆ ಮೂಲಕ ನೀವು ಭಾ.ದಂ.ಸಂ. ಕಲಂ.323ರ ಸಹವಾಚಕ ಕಲಂ.34ರ ರೀತ್ಯ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರೆಂದು ಆರೋಪಿಸಲಾಗಿದೆ.

ಈ ಮೇಲ್ಕಂಡ ದೋಷಾರೋಪವನ್ನು ನೀವು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿದ್ದು ನಿಮ್ಮನ್ನು ವಿಚಾರಣೆಗೆ ಒಳಪಡಿಸಲು ಈ ಮೂಲಕ ನಾನು ನಿರ್ದೇಶಿಸುತ್ತೇನೆ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ಹೊಸಕೋಟೆ.**

**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸಕೋಟೆ</u>**

**<u>ಸಿ. ಸಿ. ನಂ. 1772/2017</u>**

ಪಿರ್ಯಾದುದಾರರು:– ನಂದಗುಡಿ ಪೋಲೀಸ್ ಠಾಣೆ, ಹೊಸಕೋಟೆ

ವಿರುದ್ಧ

ಆರೋಪಿಗಳು:– 1. ಕೃಷ್ಣಪ್ಪ ಜಿ.ಎಂ. ಬಿನ್ ಮುನಿವೆಂಕಟಪ್ಪ, 55 ವರ್ಷ
2. ಮುನಿರಾಜು ಬಿನ್ ಮುನಿವೆಂಕಟಪ್ಪ, 39 ವರ್ಷ
ಇಬ್ಬರ ವಾಸ: ಮುಗಬಾಳ, ಜಡಿಗೇನಹಳ್ಳಿ ಹೋಬಳಿ,
ಹೊಸಕೋಟೆ ತಾಲ್ಲೂಕು.

**<u>ದೋಷಾರೋಪಣೆ</u>**

ಪ್ರಶ್ನೆ 1: ಮೇಲ್ಕಂಡ ದೋಷಾರೋಪಣೆ ಓದಿ ಹೇಳಿದ್ದು ನಿಮಗೆ ಅರ್ಥವಾಯಿತೆ?

ಉತ್ತರ:

ಪ್ರಶ್ನೆ 2: ನೀವು ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ?

ಉತ್ತರ:

ಮೇಲ್ಕಂಡ ಆಪಾದನೆಯನ್ನು ಆರೋಪಿಗಗಳಿಗೆ ಓದಿ ಹೇಳಿ ಅವರ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆ ಎಂದು ತೆರೆದ ನ್ಯಾಯಾಲಯದಲ್ಲಿ ದಿ:01.04.2021 ರಂದು ಧೃಢೀಕರಿಸಿದ್ದೇನೆ.

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**
**ಹೊಸಕೋಟೆ.**